ಎಂಬುವವರು 'ವ್ಯಕ್ತಿ' ಎಂದೂ, ಕವನ ಬರೆಯುವ 'ಅಂಬಿಕಾತನಯದತ್ತ' ಎಂಬುದೂ ಗೊತ್ತು. ಈ ವಿಭಜನೆಯನ್ನು ಬೇಂದ್ರೆಯವರು 'ಕಸ್ತೂರಿ' ಮಾಸಿಕಕ್ಕೆ ಬರೆದ ಲೇಖನದಲ್ಲಿ ('ನನ್ನ ನಾ ಕಂಡಂತೆ', 1963) ಸ್ಪಷ್ಟಪಡಿಸಿದ್ದಾರೆ. ಅಷ್ಟು ಮಾತ್ರವಲ್ಲದೆ, ಹಲವು ಸಭೆ-ಸಮಾರಂಭಗಳ ಭಾಷಣಗಳಲ್ಲಿ ಮತ್ತು ನಡವಳಿಕೆಗಳಲ್ಲಿ ಖಚಿತವಾಗುವಂತೆ ನಡೆದುಕೊಂಡಿದ್ದಾರೆ.


ಬರಲಿರುವ ಕುಸುಮಗಳು

ಮೆದಿನಾಪುರಮಲ್ಲ
(ಸಾಹಸಚರಿತೆಯನ್ನು ಚಿತ್ರಿಸುವ ಕಾದಂಬರಿ)
ಬರೆದವರು: 'ಗುರುರಾಜ'

ಮೂಕಬಲಿ
(ಸಾಮಾಜಿಕ ಕಾದಂಬರಿ)
ಬರೆದವರು: ಜಡಭರತ

ಸಮರಸವೇ ಜೀವನ
(ಇತ್ಯೋಪಿಯ ಕೊಟ್ಟಿಯ ಭಾಗ)
ಬರೆದವರು: ವಿ. ಕೃ. ಗೋಕಾಕ

ತಾಯಿ
(ಪರ್ಲ್ ಬಕ್‌ಳ ಕಾದಂಬರಿಯ ಆಧಾರದಿಂದ)
ಬರೆದವರು: ಕೃಷ್ಣಕುಮಾರ

ಮನಸಪುತ್ರ
(ಸಾಮಾಜಿಕ ಕಾದಂಬರಿ)
ಬರೆದವರು: ದ. ರಾ. ಬೇಂದ್ರೆ

ಚೇನದ ಬಾಳು-ಬದುಕು
(ಚೀನದೇಶದ ಸಣ್ಣಕತೆಗಳ ಪ್ರತಿನಿಧಿಕ ಸಂಗ್ರಹ)
ಅನುವಾದಕರು: ದ. ರಾ. ಬೇಂದ್ರೆ ಮತ್ತು ಗುಂಡಪ್ಪ

ಈ ವಿದಳನ ಬೇಂದ್ರೆಯವರಿಗೆ ಸುಲಭ ಇರಬಹುದು. ಆದರೆ, ಓದುಗರಿಗೆ ಅದನ್ನು ಅರಿಯುವುದು-ತಿಳಿದುಕೊಳ್ಳುವುದು ಅಷ್ಟು ಸುಲಭ ಅಲ್ಲ. ಬೇಂದ್ರೆಯವರ ಬಹುತೇಕ ಅಲ್ಲ, ಎಲ್ಲ ಕವನ ಸಂಕಲನಗಳು 'ಅಂಬಿಕಾತನಯದತ್ತ' ಹೆಸರಿನಲ್ಲಿಯೇ ಪ್ರಕಟಗೊಂಡಿವೆ. ಆದರೆ, ಬೇಂದ್ರೆಯವರು ಕೆಲವು ಕವನಗಳನ್ನು ಪತ್ರಿಕೆ/ಪುಸ್ತಕಗಳಲ್ಲಿ ಪ್ರಕಟಿಸುವಾಗ 'ದ.ರಾ. ಬೇಂದ್ರೆ' ಎಂದೂ ಪ್ರಕಟಿಸಿದ್ದಾರೆ. 'ಮಿಂಚಿನಬಳ್ಳಿ' ಪ್ರಕಟಿಸಿದ (1940) ಬುರ್ಲಿ ಬಿಂದು ಮಾಧವ ಅವರು ಸಂಪಾದಿಸಿದ ರಾಷ್ಟ್ರೀಯ ಗೀತೆಗಳ 'ನಾಡ ಹಾಡುಗಳು' ಸಂಕಲನದಲ್ಲಿ ಬೇಂದ್ರೆ ಮತ್ತು ಅಂಬಿಕಾತನಯದತ್ತ ಎಂಬ ಎರಡೂ ಹೆಸರುಗಳಲ್ಲಿ ಕವಿತೆಗಳು ಪ್ರಕಟವಾಗಿವೆ. 'ಕನಸಿನೊಳಗೊಂದು ಕಣಸು', 'ಹರಕೆ', 'ಓ ಹಾಡೆ' ಕವಿತೆಗಳು 'ಕನ್ನಡ ಹಾಡುಗಳು' ಭಾಗದ 'ಕನ್ನಡ ನುಡಿ' ವಿಭಾಗದಲ್ಲಿ ಪ್ರಕಟಗೊಂಡಿವೆ. 'ಭಾರತದ ಗೀತೆಗಳು' ಭಾಗದ 'ಭಾರತೀಯತ್ವ' ವಿಭಾಗದಲ್ಲಿ 'ತುತ್ತಿನ ಚೀಲ' ಕವಿತೆ ಸೇರಿದ್ದರೆ, 'ವೀರಗೀತೆಗಳು' ಭಾಗದಲ್ಲಿ 'ಬಿಡುಗಡೆ', 'ಒಂದೇ ಕರ್ನಾಟಕ' ಗೀತಗಳು ಸೇರಿವೆ. 'ಧ್ವಜಗೀತೆಗಳು' ಭಾಗದಲ್ಲಿ 'ನಾಡಗುಡಿ' ಎಂಬ ಕವಿತೆಯಿದೆ. ಇವೆಲ್ಲವೂ 'ಅಂಬಿಕಾತನಯದತ್ತ' ಎಂಬ ಹೆಸರಿನಲ್ಲಿ ಪ್ರಕಟಗೊಂಡರೆ, ಅದೇ ಸಂಕಲನದ 'ರಾಷ್ಟ್ರಗೀತೆಗಳು' ಭಾಗದಲ್ಲಿ ಪೋಲಂಡ, ಫಿನ್‌ಲಂಡ, ನಾರ್ವೆ, ಗ್ರೀಸ್ ಹಾಗೂ ಜಪಾನ್ ದೇಶದ ರಾಷ್ಟ್ರಗೀತೆಗಳನ್ನು 'ದ.ರಾ. ಬೇಂದ್ರೆ' ಎಂಬ ಹೆಸರಿನಲ್ಲಿ ಅನುವಾದಿಸಿ ಪ್ರಕಟಿಸಿದ್ದಾರೆ.

ಹುಬ್ಬಳ್ಳಿಯ 'ಶ್ರೀಅರವಿಂದ ಮಂಡಲ'ದವರು 1950ರಿಂದ 1954ರ ನಡುವಿನ ಅವಧಿಯಲ್ಲಿ ಅರವಿಂದರು ಮತ್ತು ಶ್ರೀಮಾತಾ ಅವರ ಹಾಗೂ ಅವರಿಗೆ ಸಂಬಂಧಿಸಿದ ಬರಹಗಳನ್ನು 'ಸಮರ್ಪಣ' ಎಂಬ ಐದು ಸಂಪುಟಗಳಲ್ಲಿ ಪ್ರಕಟಿಸಿದ್ದರು. ಮೊದಲ ಸಂಪುಟದಲ್ಲಿ (1950) 'ಪ್ರಾರ್ಥನೆ' ಕವಿತೆಯು 'ಅಂಬಿಕಾತನಯದತ್ತ' ಎಂದೂ, 'ವೇದ ರಹಸ್ಯ' ಎಂಬ ಬರಹವು 'ದತ್ತ ರಾಮ ಬೇಂದ್ರೆ' ಎಂಬ ಹೆಸರಿನಲ್ಲೂ ಪ್ರಕಟಗೊಂಡಿದೆ. 'ಸಮರ್ಪಣ'ದ ಎರಡನೇ ಸಂಪುಟದಲ್ಲಿ 'ದಿ ಮದರ್' ಕವನವು ಅಂಬಿಕಾತನಯದತ್ತ ಅವರದ್ದಾದರೆ, ಶ್ರೀಅರವಿಂದರ ಕವನಗಳನ್ನು 'ದ.ರಾ. ಬೇಂದ್ರೆ' ಭಾಷಾಂತರಿಸಿದ್ದಾರೆ. ಮೂರನೇ ಸಂಪುಟದಲ್ಲಿಯೂ ಅರವಿಂದರ ಕವಿತೆಗಳ ಅನುವಾದಗಳಿವೆ. ನಾಲ್ಕನೆಯ ಸಂಪುಟದಲ್ಲಿನ (1953) 'ಮಹಾಪ್ರಸ್ಥಾನ' ಕವಿತೆಯು 'ಅಂಬಿಕಾತನಯದತ್ತ'ರದ್ದು.

ಅಂದರೆ, ಬೇಂದ್ರೆಯವರು ತಮ್ಮ ಬರಹಗಳ ಪೈಕಿ ಸ್ವಂತ ಕವಿತೆಗಳ ರಚನೆಯ ಜವಾಬ್ದಾರಿಯನ್ನು 'ಅಂಬಿಕಾತನಯದತ್ತ'ರಿಗೆ ನೀಡಿದರೆ, ಗದ್ಯ, ನಾಟಕ, ಅನುವಾದಗಳ ಹೊಣೆಗಾರಿಕೆಯನ್ನು 'ದ.ರಾ. ಬೇಂದ್ರೆ' ಅವರಿಗೆ ವಹಿಸಿದ್ದರು.